# ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 356

2] ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3] ಉತ್ತರಿಸುವ ದಿನಾಂಕ : 15/09/2022

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿರುವುದರಿಂದ ದೇವನಹಳ್ಳಿಯನ್ನು ಬೆಂಗಳೂರು ಪೊಲೀಸ್ ಆಯುಕ್ತರ ವ್ಯಾಪ್ತಿಗೆ ಸೇರಿಸಿರುವುದರಿಂದ, ಸಾರ್ವಜನಿಕರು ತೊಂದರೆಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದೇವನಹಳ್ಳಿ ಪೊಲೀಸ್ ಠಾಣೆಯು ಬೆಂಗಳೂರು ನಗರ ಪೊಲೀಸ್ ಘಟಕದಿಂದ ಸೃಜನೆಗೊಂಡು, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/27/ಪಿಓಪಿ/08, ದಿನಾಂಕ:12.05.2008ರನ್ವಯ ದಿನಾಂಕ: 14.05.2008ರಿಂದ ಬೆಂಗಳೂರು ನಗರ ಘಟಕದ ಈಶಾನ್ಯ ವಿಭಾಗಕ್ಕೆ ಒಳಗೊಂಡು ಕಾರ್ಯಾರಂಭವನ್ನು ಮಾಡಿರುತ್ತದೆ.<br><br>ದೇವನಹಳ್ಳಿ ವ್ಯಾಪ್ತಿಯಲ್ಲಿ ನಗರೀಕರಣದ ಬೆಳವಣಿಗೆಯಿಂದ ಹಾಗೂ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ದೇವನಹಳ್ಳಿ ಸಮೀಪ ಕಾರ್ಯಾರಂಭ ಮಾಡಿದ ನಂತರದಲ್ಲಿ ದೇವನಹಳ್ಳಿ ಪ್ರದೇಶವು ಬೆಂಗಳೂರು ನಗರದ ಒಂದು ಭಾಗವಾಗಿದೆ. ದೇವನಹಳ್ಳಿ ವಿಭಾಗದ ಮಹತ್ವ ಹೆಚ್ಚಾಗಿರುವುದರಿಂದ, ಸದರಿ ಪ್ರದೇಶಕ್ಕೆ ನಗರ ಪ್ರದೇಶದ ಪೊಲೀಸ್ ವ್ಯವಸ್ಥೆಯನ್ನು ಅಳವಡಿಸುವ ಅವಶ್ಯಕತೆಯನ್ನು ಮನಗಂಡು ಅಂದರೆ, ಹೆಚ್ಚಿನ ಪೊಲೀಸ್ ಅಧಿಕಾರಿ/ಸಿಬ್ಬಂದಿ ವ್ಯವಸ್ಥೆ (ಹೊಯ್ಸಳ/ಚೀತಾ ಗಸ್ತು) ಸೇರಿದಂತೆ ಅಪರಾಧ ನಿಯಂತ್ರಣ/ಕಾನೂನು ಸುವ್ಯವಸ್ಥೆ ನಿರ್ವಹಣೆಗಾಗಿ ನಗರ ವ್ಯಾಪ್ತಿಗೆ ಸೇರ್ಪಡೆಗೊಳಿಸಿ ಕ್ರಮ ಜರುಗಿಸಲಾಗಿದೆ.<br><br>ದೇವನಹಳ್ಳಿ ಪೊಲೀಸ್ ಠಾಣೆಯನ್ನು ಬೆಂಗಳೂರು ನಗರ ವ್ಯಾಪ್ತಿಗೆ ವಿಲೀನಗೊಳಿಸಿ, ಸದರಿ ಠಾಣೆಯನ್ನು ಈಶಾನ್ಯ ವಿಭಾಗದ ಅಧೀನದಲ್ಲಿಟ್ಟಿದ್ದು, ಡಿಸಿಪಿ, ಈಶಾನ್ಯ ವಿಭಾಗರವರ ಕಛೇರಿಯು ಹೆಬ್ಬಾಳದ ಕೆಂಪಾಪುರ ಭಾಗದಲ್ಲಿದ್ದು, ಈ ಕಛೇರಿಯು ದೇವನಹಳ್ಳಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ವರಿಷ್ಠಾಧಿಕಾರಿಯವರ ಕಛೇರಿಗಿಂತಲೂ ಬಹಳ ಸಮೀಪದಲ್ಲಿ ಇರುವ ಕಾರಣ ಸಾರ್ವಜನಿಕರಿಗೆ ಅನಾನುಕೂಲಕರವಾಗುವ ಸನ್ನಿವೇಶಗಳು ಇರುವುದಿಲ್ಲ. |
| ಆ) | ಬಂದಿದ್ದಲ್ಲಿ, ಇಲ್ಲಿನ ಸ್ಥಳೀಯ ಜನರು ಇನ್ನೂ ಸಂಪೂರ್ಣವಾಗಿ ನಗರ ಜೀವನ ಶೈಲಿಗೆ ಹೊಂದಿಕೊಂಡಿಲ್ಲವಾದ್ದರಿಂದ, ದೇವನಹಳ್ಳಿ ಪಟ್ಟಣವನ್ನು ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಮಾಹಿತಿ ನೀಡುವುದು) | ದೇವನಹಳ್ಳಿ ಪೊಲೀಸ್ ಠಾಣೆಯನ್ನು ಪುನ: ಗ್ರಾಮಾಂತರ ಜಿಲ್ಲಾ ವ್ಯಾಪ್ತಿಗೆ ಸೇರಿಸುವ ಅವಶ್ಯಕತೆ ಇರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 136 ಪಿಓಪಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.